UASB Library
Newspaper Clippings
Tuesday 19-04-2022 Pg .1
Jai Kisan

ಅರೆಬೆಂದ ಅಕ್ಕಿಗೇಕೆ ಕೇಂದ್ರ ನಿರ್ಬಂಧ?





ತೆಲಂಗಾಣದ ಪ್ರಮುಖ ಬೆಳೆಯಾಗಿರುವ ಅರೆಬೆಂದ ಅಕ್ಕಿಗೆ (ಪ್ಯಾರಾ ಬಾಯಿಲ್ಡ್ ರೈಸ್) ಬೇಡಿಕೆ ಕಡಿಮೆಯಾಗಿರುವ ಹಿನ್ನೆಲೆ ಅಕ್ಕಿಯ ಹುಮ್ಮಸ್ಸಿ ಖರೀದಿಯನ್ನು ನಿಲ್ಲಿಸುವುದಾಗಿ ಕೇಂದ್ರ ಸರ್ಕಾರ ತಿಳಿಸಿದ್ದು, ಈ ಸಂಬಂಧಿಸಿದಂತೆ ಇತ್ತೀಚೆಗಷ್ಟೇ ತೆಲಂಗಾಣದಲ್ಲಿ ಪ್ರತಿಭಟನೆ ನಡೆಸಲಾಗಿದೆ. ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಹಾಗೂ ಸಚಿವ ಸಂಪುಟ ಸದಸ್ಯರು ಪ್ರತಿಭಟನೆ ನಡೆಸಿದ್ದು, ಎಕರೂಪದ ಭತ್ತ ಖರೀದಿ ನೀತಿಗೆ ಒತ್ತಾಯಿಸಿದ್ದಾರೆ. ಇಷ್ಟಕ್ಕೂ ಈ ಅರೆಬೆಂದ ಅಕ್ಕಿ ಎಂದರೇನು ? ಅದರ ಪ್ರಯೋಜನವೇನು ? ಬೇಡಿಕೆ ಎಷ್ಟಿದೆ ? ಕೇಂದ್ರ ಏಕೆ ಖರೀದಿಗೆ ಹಿಂದೇಟಾಕುತ್ತಿದೆ ಎಂಬುದರ ವಿವರ ಇಲ್ಲಿದೆ.

ಅರೆಬೆಂದ ಅಕ್ಕಿ ಎಂದರೇನು ?

ಪ್ಯಾರಾಬಾಯಿಲ್ಡ್ ಅಂದರೆ ಭತ್ತವನ್ನು ಭಾಗಶಃ ಬೇಯಿಸುವುದು ಎಂದರ್ಥ. ಹಿಂಗಾರಿನ ಋತುವಿನಲ್ಲಿ ಅಧಿಕ ಉಷ್ಣಾಂಶ ಕಾರಣ ತೆಲಂಗಾಣದಲ್ಲಿ ಬೆಳೆದ ಭತ್ತವನ್ನು ಗಿರಣಿ ಮಾಡುವಾಗ ಅಕ್ಕಿ ಕೊನೆಯಲ್ಲಿ ಮುರಿಯುತ್ತದೆ (ಸುಚ್ಚಾಗುತ್ತದೆ). ಇದನ್ನು ತಡೆಯಲೆಂದೇ ಕೇಂದ್ರ ಸರ್ಕಾರ ನೀಡಿದ ಸೂಚನೆ ಮೇರೆಗೆ ದಶಕಗಳ ಹಿಂದೆಯೇ ಅರೆಬೆಂದ ಅಕ್ಕಿ ವಿಧಾನ ಜಾರಿಗೆ ಬಂತು. ಭತ್ತವನ್ನು ನೆನೆಸಿ, ನಿಗಧಿತ ಉಷ್ಣಾಂಶದಲ್ಲಿ ಬೇಯಿಸಿ, ಆರಿಸಿದ ಬಳಿಕ ಗಿರಣಿ ಮಾಡಿದರೆ ಬರುವುದೇ ಅರೆಬೆಂದ ಅಕ್ಕಿ. ಇದಕ್ಕಾಗಿ ಪ್ರತ್ಯೇಕವಾಗಿ ಯಂತ್ರಗಳನ್ನು ಅಳವಡಿಸುವ ಅಗತ್ಯವಿದೆ.



ಪ್ರಾಚೀನ ಪದ್ಧತಿ

ಭತ್ತವನ್ನು ಬೇಯಿಸುವುದು ಹೊಸ ಪದ್ಧತಿ ಯಲ್ಲ, ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಈ ಪದ್ಧತಿ ಅನುಸರಿಸಲಾಗುತ್ತಿದೆ. ಸಾಮಾನ್ಯವಾಗಿ 8 ಗಂಟೆಗಳ ಕಾಲ ಭತ್ತವನ್ನು ನೀರಿನಲ್ಲಿ ನೆನೆಸಿ, ಬಿಸಿಲಿನಲ್ಲಿ ಒಣಗಿಸ ಲಾಗುತ್ತದೆ. ಆದರೆ ಆಧುನಿಕ ಕಾಲದಲ್ಲಿ ಭತ್ತವನ್ನು ಬೇಯಿ ಸಲು ಹಲವಾರು ಪ್ರಕ್ರಿ ಯೆಗಳಿವೆ. ಎಲ್ಲಾ ಪ್ರಕ್ರಿಯೆಗಳು ಸಾಮಾನ್ಯವಾಗಿ ನೆನೆಸುವುದು, ಆವಿಯಲ್ಲಿ ಬೇಯಿಸುವುದು, ಒಣಗಿಸುವುದು ಈ ಹಂತ ಒಳಗೊಂಡಿರುತ್ತವೆ ಬಳಿಕ ಭತ್ತವನ್ನು ಮಿಲ್ಲಿಂಗ್‌ಗೆ ನೀಡಲಾಗುತ್ತದೆ.

ಯಾವ ತಳಿ ಭತ್ತ ಬೇಯಿಸಬಹುದು ?

ಸಾಮಾನ್ಯವಾಗಿ ಎಲ್ಲಾ ಪ್ರಭೇದಗಳ ಭತ್ತವನ್ನು ಅರೆಬೆಂದಅಕ್ಕಿಯಾಗಿ ಸಂಸ್ಕರಿಸಬಹುದು. ಆದರೆ ಮಿಲ್ಲಿಂಗ್ ಸಮಯದಲ್ಲಿ ನುಚ್ಚಾಗುವುದನ್ನು ತಡೆಗಟ್ಟಲು ಉದ್ದವಾದ ತೆಳುವಾದ ಪ್ರಭೇದಗಳನ್ನು ಮಾತ್ರವೇ ಹೆಚ್ಚು ಈ ಪ್ರಕ್ರಿಯೆಯಲ್ಲಿ ಸಂಸ್ಕರಿಸಲಾಗುತ್ತದೆ. ಆದಾಗ್ಯೂ, ಆರೊಮ್ಯಾಟಿಕ್ ಪ್ರಭೇದಗಳನ್ನು ಬೇಯಿಸಬಾರದು ಏಕೆಂದರೆ ಈ ಪ್ರಕ್ರಿಯೆಯು ಅದರ ಪರಿಮಳವನ್ನು ತೆಗೆದುಹಾಕಿಬಿಡುತ್ತದೆ.



ಪ್ರಯೋಜನವೇನು ?

- ಮಿಲ್ಲಿಂಗ್ ಸಮಯದಲ್ಲಿ ಭತ್ತ ಒಡೆಯುವ ಸಾಧ್ಯತೆ ಕಡಿಮೆ
- ಪಾಯಸ ಮಾಡುವುದರಿಂದ ಅಕ್ಕಿಯ ಪೌಷ್ಟಿಕಾಂಶದ ಮೌಲ್ಯ ಹೆಚ್ಚಳ
- ಕೀಟಗಳು ಮತ್ತು ಶಿಲೀಂಧ್ರಗಳಿಗೆ ಹೆಚ್ಚಿನ ಪ್ರತಿರೋಧವನ್ನು ಅಕ್ಕಿ ಹೊಂದಿದೆ

ಅನಾನುಕೂಲಗಳೇನು ?

- ಅರೆಬೆಂದ ಅಕ್ಕಿಯಿಂದ ಮಾಡುವ ಅನ್ನ ಗಡಸಾಗುವ ಸಾಧ್ಯತೆ ಹೆಚ್ಚಿದೆ
- ಹೆಚ್ಚು ನೆನೆಸಿದ ಕಾರಣ ಆಹಿತಕರ ವಾಸನೆಯನ್ನು ಉಂಟುಮಾಡಬಹುದು.
- ಪ್ಯಾರಾ ಬಾಯ್ಲಿಂಗ್ ರೈಸ್ ಮಿಲ್ಲಿಂಗ್ ಘಟಕ ಸ್ಥಾಪಿಸಲು ಹೆಚ್ಚಿನ ಹೂಡಿಕೆ ಅಗತ್ಯ

- ಮೈಸೂರಿನಲ್ಲಿರುವ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾ ಸಂಸ್ಥೆಯು (ಸಿಎಫ್‌ಟಿಆರ್ ಐ) ಭತ್ತವನ್ನು ಬಿಸಿ ನೀರಿನಲ್ಲಿ ಮೂರು ಗಂಟೆಗಳ ಕಾಲ ನೆನೆಸಿಡುವ ವಿಧಾನವನ್ನು ಬಳಸುತ್ತದೆ. ನಂತರ ನೀರನ್ನು ಸೋಸಿ ಮತ್ತೆ 20 ನಿಮಿಷಗಳ ಕಾಲ ಹಬೆಯಲ್ಲಿ ಬೇಯಿಸಿ ನಂತರ ಭತ್ತವನ್ನು ನೆರಳಿನಲ್ಲಿ ಒಣಗಿಸಲಾಗುತ್ತದೆ.
- ಇನ್ನು ತಂಜಾವೂರಿನ ಭತ್ತದ ಸಂಸ್ಕರಣಾ ಸಂಶೋಧನಾ ಕೇಂದ್ರ (ಪಿ�ಆರ್‌ಸಿ) ಕ್ರೋಮೇಟ್ ಸೋಕಿಂಗ್ ಪ್ರಕ್ರಿಯೆ ಎಂದು ಕರೆಯಲ್ಪಡುವ ವಿಧಾನವನ್ನು ಅನುಸರಿಸುತ್ತದೆ. ಇದರಲ್ಲಿ ಅಯಾನು ಕ್ರೋಮಿಯಂ ಮತ್ತು ಅಮ್ಲಜನಕ ಎರಡನ್ನೂ ಒಳಗೊಂಡಿರುವ ಉಪ್ಪಿನ ಅಂಶದಲ್ಲಿ ಭತ್ತವನ್ನು ಸಂಸ್ಕರಿಸಲಾಗುವುದು ಇದು ಒದ್ದೆಯಾದ ಅಕ್ಕಿಯ ವಾಸನೆಯನ್ನು ತೆಗೆದುಹಾಕಲು ಸಹಕಾರಿಯಾಗುತ್ತದೆ.

ಅಕ್ಕಿಯ ದಾಸ್ತಾನು ಎಷ್ಟು?

ಆಹಾರ ಸಚಿವಾಲಯದ ಪ್ರಕಾರ, ಏಪ್ರಿಲ್ 1, 2022 ರಂತೆ ಒಟ್ಟು 40.58 ಲಕ್ಷ ಮೆಟ್ರಿಕ್ ಟನ್ (ಎಲ್‌ಎಂಟಿ) ಅಕ್ಕಿ ಸಂಗ್ರಹವಾಗಿದೆ. ಈ ಪೈಕಿ ಅತಿ ಹೆಚ್ಚು ದಾಸ್ತಾನು ಅಂದರೆ 16.52 ಎಲ್‌ಎಂಟಿ, ತೆಲಂಗಾಣ ಹೊಂದಿದ್ದು, ನಂತರ ತಮಿಳುನಾಡು (12.09 ಎಲ್‌ಎಂಟಿ) ಮತ್ತು ಕೇರಳ (3ಎಲ್‌ಎಂಟಿ) ಹೊಂದಿವೆ. ಆಂಧ್ರ ಪ್ರದೇಶ, ಛತ್ತೀಸ್‌ಗಢ, ಒಡಿಶಾ, ಜಾರ್ಖಂಡ್, ಪಶ್ಚಿಮ ಬಂಗಾಳ, ಕರ್ನಾಟಕ, ಬಿಹಾರ, ಪಂಜಾಬ್ ಮತ್ತು ಹರ್ಯಾಣದಲ್ಲಿ 0.04-2.92 ಎಲ್‌ಎಂಟಿ ಸಂಗ್ರಹವಿದೆ.

ಕೇಂದ್ರ ಹೇಳಿರುವುದೇನು ?

2020-21ರ ಖಾರಿಫ್ ಮಾರುಕಟ್ಟೆ ಸೀಸನ್ (ಕೆಎಂಎಸ್) ಗಾಗಿ ಕೇಂದ್ರವು ತೆಲಂಗಾಣದಿಂದ 1.36 ಎಲ್‌ಎಂಟಿ ಅಕ್ಕಿಯನ್ನು ಸಂಗ್ರಹಿಸಲಿದೆ. ನಡೆಯುತ್ತಿರುವ ಕೆಎಂಎಸ್ 2021-22 ಗಾಗಿ, ಕೇಂದ್ರವು ಕೇವಲ ಎರಡು ರಾಜ್ಯಗಳಿಂದ ಜಾರ್ಖಂಡ್ ಹಾಗೂ ಒಡಿಶಾದಿಂದ 5.82 ಎಲ್‌ಎಂಟಿ ಬೇಯಿಸಿದ ಅಕ್ಕಿಯನ್ನು ಸಂಗ್ರಹಿಸಲು ನಿರೀಕ್ಷಿಸಿದೆ. ತೆಲಂಗಾಣ ಸೇರಿದಂತೆ ಇತರ 10 ಅಕ್ಕಿ ಉತ್ಪಾದಿಸುವ ರಾಜ್ಯಗಳಿಂದ, ಬೇಯಿಸಿದ ಅಕ್ಕಿಯನ್ನು ಸಂಗ್ರಹಿಸುವ ಯಾವುದೇ ಯೋಜನೆಯನ್ನು ಸಚಿವಾಲಯ ಹೊಂದಿಲ್ಲ ಎಂದಿದೆ. ಮುಂದಿನ ದಿನಗಳಲ್ಲಿ, ಒಟ್ಟು ಅಕ್ಕಿಯ ಸಂಗ್ರಹವು 47.76 ಎಲ್‌ಎಂಟಿಗೆ ಹೆಚ್ಚಾಗುತ್ತದೆ ಎನ್ನಲಾಗಿದೆ.



ನಿರಾಕರಣೆಗೆ ಕಾರಣವೇನು ?

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013 ರ ಅನ್ವಯ ಆಹಾರ ಸಚಿವಾಲಯವು ವಾರ್ಷಿಕ 20 ಎಲ್‌ಎಂಟಿ ಅರೆಬೆಂದ ಅಕ್ಕಿ ಬೇಡಿಕೆಯನ್ನು ನಿಗದಿಪಡಿಸುತ್ತದೆ. ಸಚಿವಾಲಯದ ಪ್ರಕಾರ, ಇತ್ತೀಚಿನ ವರ್ಷಗಳಲ್ಲಿ ಬೇಯಿಸಿದ ಅಕ್ಕಿಯ ಬೇಡಿಕೆ ಕಡಿಮೆಯಾಗಿದೆ. ಕಾರಣ ಅಕ್ಕಿ ಉತ್ಪಾದನಾ ರಾಜ್ಯಗಳಲ್ಲಿ ಉತ್ಪಾದನೆ ಹೆಚ್ಚಾಗಿದೆ. ಈ ಮೊದಲು ಇತರೆ ರಾಜ್ಯಗಳಿಗೆ ಸರಬರಾಜು ಮಾಡಲು ಭಾರತೀಯ ಆಹಾರ ನಿಗಮ (ಎಫ್‌ಸಿಐ) ತೆಲಂಗಾಣದಂತಹ ರಾಜ್ಯಗಳಿಂದ ಬೇಯಿಸಿದ ಅಕ್ಕಿಯನ್ನು ಸಂಗ್ರಹಿಸುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ, ಉತ್ಪಾದನೆ ಹೆಚ್ಚಾಗಿದೆ. ಹಾಗಾಗಿ, ಮುಂದಿನ ಎರಡು ವರ್ಷಗಳ ಬೇಡಿಕೆಯನ್ನು ಪೂರೈಸಲು ಪ್ರಸ್ತುತ ಅಕ್ಕಿಯ ಸಂಗ್ರಹವು ಸಾಕಾಗುತ್ತದೆ ಎಂದು ಸಚಿವಾಲಯ ಹೇಳಿದ್ದು, ಸದ್ಯಕ್ಕೆ ಖರೀದಿಯ ಅಗತ್ಯವಿಲ್ಲ ಎಂದಿದೆ.

19-04-2022 Hd Pg 05

For more information visit
University Library Website
Web - uasbagrilibindia.org
E-mail- librarian@uasbangalore.edu.in

ಎಟುಕದ ಮಾವು ಈ ವರ್ಷ ಹುಳಿ!

ಇಳುವರಿಯಲ್ಲಿ ತೀವ್ರ ಕುಸಿತ: ಹಣ್ಣಿನ ದರ ದುಪ್ಪಟ್ಟು

ನ ಹೂವಪ್ಪ ಎಚ್ ಇಂಗಳಗೊಂದಿ ಬೆಂಗಳೂರು

ಈವರ್ಷ ಮಾವಿನ ಇಳುವರಿಯಲ್ಲಿ ತೀವ್ರ ಕುಸಿತ ಕಂಡುಬಂದಿದ್ದು, ಮಾರುಕಟ್ಟೆ ಆವಕವೂ ಕಡಿಮೆಯಾಗಿದೆ. ಪರಿಣಾಮ ಹಣ್ಣಿನ ರಾಜನ ಬೆಲೆ ದುಪ್ಪಟ್ಟಾಗಿದೆ.

ಸಾಮಾನ್ಯವಾಗಿ ಏಪ್ರಿಲ್ ಮೊದಲ ವಾರದಲ್ಲಿ 10ರಿಂದ 20 ಟನ್ ಮಾವು ಮಾರುಕಟ್ಟೆಗೆ ಬರುತ್ತಿತ್ತ. ಗರಿಷ್ಠ ಸೀಸನ್‌ನಲ್ಲಿ ದಿನಕ್ಕೆ 100ರಿಂದ 150 ಟನ್ ಮಾವು ಬರುತ್ತಿತ್ತು. ಆದರೆ ಈ ವರ್ಷ ಏಪ್ರಿಲ್ ಮೊದಲ ವಾರದಲ್ಲಿ ಕೇವಲ ಒಂದೆರಡು ಟನ್ ಮಾವಿನ ಹಣ್ಣಷ್ಟೇ ಮಾರುಕಟ್ಟೆಗೆ ಬರುತ್ತಿದ್ದು, ಪೂರೈಕೆ ಕೊರತೆಯಿಂದಾಗಿ ಸಹಜವಾಗಿ ಬೆಲೆ ದುಪ್ಪಟ್ಟಾಗಿದೆ.

ವಾಡಿಕೆಯಂತೆ ಮಾವಿನ ಹೂವುಗಳು ಡಿಸೆಂಬರ್‌ನಲ್ಲಿ ಕಟ್ಟುತ್ತವೆ. ಆ ಸಮಯದಲ್ಲಿ ಮಾವಿನ ಹೂವುಗಳಿಗೆ ಸ್ವಲ್ಪ ಶುಷ್ಕತೆ ಬೇಕಾಗುತ್ತದೆ. ಮಳೆ ಮತ್ತು ಚಳಿ ವಾತಾವರಣವಿದ್ದರೆ ಹೂವುಗಳ ಮೇಲೆ ಪರಿಣಾಮ ಬೀರುತ್ತದೆ. ಕಳೆದ ಡಿಸೆಂಬರ್‌ನಲ್ಲಿ ಸುರಿದ ಮಳೆಗೆ ಹೂವು ಉದುರಿ, ಮಾವಿನ ಇಳುವರಿ ಕ್ಷೀಣಿಸಿದೆ.

ಕಳೆದ ಎರಡು ವರ್ಷಗಳಲ್ಲಿ ಮಾವಿನ ಹಣ್ಣಿನ ಇಳುವರಿ ಸಾಕಷ್ಟು ಇತ್ತು, ಬೆಲೆಯೂ ಕಡಿಮೆ ಇತ್ತು. ಆದರೆ ಕೋವಿಡ್ ಸಾಂಕ್ರಾಮಿಕದಿಂದಾಗಿ ಮಾವಿನ ಹಣ್ಣು ತಿನ್ನುವುದಿರಲಿ ಮುಟ್ಟುವುದಕ್ಕೂ ಜನ ಹೆದರುತ್ತಿದ್ದರು. ವಿಪರ್ಯಾಸವೆಂದರೆ ಈ ವರ್ಷ ಕೋವಿಡ್ ಭಯ ಇಲ್ಲ. ರುಚಿಕರ ಹಣ್ಣಿನ ರಾಜ, ಮಾವನ್ನು ಸವಿಯೋಣ ಎಂದರೆ ಬೆಲೆ ಗಗನಕ್ಕೆರಿದೆ. ದುಡ್ಡು ಇದ್ದರಿಗೆ ಮಾತ್ರ ಮಾವು ಎನ್ನುವಂತಾಗಿದೆ.

ಕಳೆದ 2 ವರ್ಷಗಳಿಂದ ಕೋವಿಡ್ ಹಾಗೂ ಲಾಕ್‌ಡೌನ್ ಕಾರಣದಿಂದಾಗಿ ಮಾವಿನ ಹಣ್ಣಿನ ಸೀಸನ್ ಬಂದಿದ್ದೂ ಗೊತ್ತಾಗಲಿಲ್ಲ, ಹೋಗಿದ್ದೂ ಗೊತ್ತಾಗಲಿಲ್ಲ. ಮಾವಿನ ವ್ಯಾಪಾರವನ್ನೇ ನಂಬಿಕೊಂಡಿದ್ದ ವ್ಯಾಪಾರಿಗಳಿಗಂತೂ 2 ವರ್ಷ ನರಕ ತೋರಿಸಿತ್ತು. ಆದರೆ ಈ ವರ್ಷ ವ್ಯಾಪಾರ ಚೆನ್ನಾಗಿ ಆಗುತ್ತೆ ಅಂದುಕೊಂಡಿದ್ದ ವ್ಯಾಪಾರಿಗಳಿಗೆ ಬೇಸರ ಮೂಡಿದೆ. ಕೋವಿಡ್, ಬ್ಲಾಕ್ ಫಂಗಸ್ ಸೇರಿದಂತೆ ಎಲ್ಲ ವೈರಸ್‌ಗಳ ಅಬ್ಬರ ಕ್ಷೀಣಿಸಿರೋದು ಎಷ್ಟು ನಿಜವೋ, ಮಾವಿನ ಹಣ್ಣಿನ ಇಳುವರಿ ಕ್ಷೀಣಿಸಿದೆ ಅನ್ನೋದು ಕೂಡ ಅಷ್ಟೇ ನಿಜವಾಗಿದೆ. ಅಕಾಲಿಕ ಮಳೆ ಹಾಗೂ ಮಾವಿನ ಮರಕ್ಕೆ ಬರೋ ಕೆಲ ರೋಗ, ಸೊಂಕಿನಿಂದ ಫಸಲಿನ ಪ್ರಮಾಣವೇ ಶೇ.25 ತಗ್ಗಿದೆ. ಹಾಗಾಗಿಯೇ ಹಣ್ಣುಗಳ ರಾಜ ಎಂದೇ ಖ್ಯಾತಿ ಪಡೆದಿರುವ ಮಾವಿನ ಹಣ್ಣಿನ ದರ ಗಗನಮುಖಿಯಾಗಿದೆ.



ತಮಿಳುನಾಡಿನಲ್ಲೂ ಮಾವು ಇಳುವರಿ ಇಲ್ಲ

ನೆರೆಯ ರಾಜ್ಯ ತಮಿಳುನಾಡಿನಲ್ಲಿಯೂ ಮಾವಿನ ಇಳುವರಿ ಕಡಿಮೆಯಾಗಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಸುರಿದ ಭಾರಿ ಮಳೆಗೆ ಹೂ ಬಿಡುವ ಹಂತದಲ್ಲಿದ್ದ ಮಾವಿನ ಮರಗಳು ನೆಲಕಚ್ಚಿದ್ದು, ಇಳುವರಿ ಕಡಿಮೆಯಾಗಲು ಕಾರಣವಾಗಿದೆ. ತಮಿಳುನಾಡಿನ ದರ್ಮಪುರಿ, ಸೇಲಂ, ಕಾವೇರಿಪಟ್ಟಮ್ ಮಾವಿನ ಹಣ್ಣುಗಳಿಗೆ ಹೆಸರುವಾಸಿಯಾಗಿದೆ. ಕಳೆದ ಎರಡು ವರ್ಷಗಳಲ್ಲಿ ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಮಾವು ಮಾರಾಟಕ್ಕೆ ಹೊಡೆತ ಬಿದ್ದಿದೆ. 2021ರಲ್ಲಿ ಟನ್‌ಗಳಷ್ಟು ಮಾವಿನಹಣ್ಣು ವ್ಯರ್ಥವಾಗಿದ್ದವು.

'ಕಳೆದ ವರ್ಷ ಕೆಜಿಗೆ 100-110 ರೂ.ಗೆ ಮಾರಾಟವಾಗಿದ್ದ ಅಲ್ಫಾನ್ಸೋ ಮಾವು 200 ರೂ.ಗೆ ಮಾರಾಟವಾಗುತ್ತಿದೆ. ಈ ವರ್ಷ ಹೊರರಾಜ್ಯಗಳಿಂದ ಹೆಚ್ಚಿನ ಆರ್ಡರ್‌ಗಳು ಬಂದಿವೆ. ಆದರೆ ಮಾವು ಕಳುಹಿಸಲು ಸಾಧ್ಯವಾಗಲಿಲ್ಲ. ಏಪ್ರಿಲ್ ಅಂತ್ಯಕ್ಕೆ ಕೇವಲ 50 ರಿಂದ 60 ಟನ್‌ಗಳ ನಿರೀಕ್ಷೆಯಿದೆ. ಸೇಲಂ ಮಾರುಕಟ್ಟೆಗೆ ದಿನಕ್ಕೆ ಮಾವಿನ ಹಣ್ಣುಗಳು ಬರುತ್ತವೆ, ಇದು ಪೀಕ್ ಸೀಸನ್‌ನಲ್ಲಿ ಬರುತ್ತಿದ್ದ ಅರ್ಧದಷ್ಟು ಮಾವು, ಪೀಕ್ ಸೀಸನ್‌ನಲ್ಲಿ, ಬೆಲೆ ಕಡಿಮೆಯಾಗಬಹುದು ಎಂದು ಹೇಳುತ್ತಾರೆ ತಮಿಳುನಾಡಿನ ಮಾವು ವ್ಯಾಪಾರಿ ಶ್ರೀನಿವಾಸನ್.

ಕಳೆದ ಡಿಸೆಂಬರ್‌ನಲ್ಲಿ ಸುರಿದ ಮಳೆಗೆ ಮಾವಿನ ಇಳುವರಿ ಕಡಿಮೆಯಾಗಿದೆ ಆಂಧ್ರ ತಮಿಳುನಾಡು ಮಹಾರಾಷ್ಟ್ರ ಮಾವು ಬರುವುದರಿಂದ ಶೇ. 50 ರಷ್ಟು ಮಾವು ಸಾರಬುರಾಜಾಗುತ್ತಿದೆ ಈಗ ಸದ್ಯ ಬೆಲೆ ಹೆಚ್ಚು ಇದೆ ಇನ್ನೊಂದು ತಿಂಗಳು ಕಳೆದರೆ ಸ್ವಲ್ಪ ದರ ಕಡಿಮೆಯಾಗುತ್ತದೆ ಎಂದು ಹೇಳುತ್ತಾರೆ.

-ಕೃಷ್ಣಕುಮಾರ್, ಕೆಆರ್ ಮಾರುಕಟ್ಟೆಯ ಎಸ್‌ಕೆಆರ್ ಮಾವು ಮಂಡಿ ವ್ಯಾಪಾರಿ

ವಾಡಿಕೆಯಂತೆ ಮಾವಿನ ಹೂವುಗಳು ಡಿಸೆಂಬರ್ನಲ್ಲಿ ಅರಳುತ್ತವೆ, ಆ ಸಮಯದಲ್ಲಿ ಮಾವಿನ ಹೂವುಗಳಿಗೆ ಸ್ವಲ್ಪ ಶುಷ್ಕತೆ ಬೇಕಾಗುತ್ತದೆ, ಮಳೆ ಮತ್ತು ಚಳಿ ವಾತಾವರಣವಿದ್ದರೆ ಹೂವುಗಳ ಮೇಲೆ ಪರಿಣಾಮ ಬೀರುತ್ತದೆ. ಕಳೆದ ಡಿಸೆಂಬರ್ನಲ್ಲಿ ಸುರಿದ ಮಳೆಗೆ ಮಾವಿನ ಇಳುವರಿ ಕ್ಷಿಣಿಸಿದೆ.

ನಂಜುಂಡಸ್ವಾಮಿ, ಶ್ರೀನಿವಾಸಪುರ ಮಾವು ಬೆಳೆಗಾರ

ಶ್ರೀನಿವಾಸಪುರದಿಂದಲೂ ಬಂದಿಲ್ಲ

ಇಷ್ಟು ವರ್ಷಗಳ ಕಾಲ ಆಂಧ್ರಪ್ರದೇಶ,ಕೋಲಾರದ ಶ್ರೀನಿವಾಸಪುರ ಹಾಗೂ ಚನ್ನಪಟ್ಟಣದಿಂದ ಹಣ್ಣಿನ ಪೂರೈಕೆ ಆಗುತ್ತಿತ್ತು. ಯಾವ ಮಂಡಿಯಲ್ಲಿ ದರ ಕಡಿಮೆ ಇರುತ್ತೋ, ಅಲ್ಲಿಂದ ತಂದು ಮಾರಾಟ ಮಾಡಲಾಗ್ತಿತ್ತು. ಆದರೆ ಈ ಬಾರಿ, ಚನ್ನಪಟ್ಟಣ ಬಿಟ್ಟು ಬೇರೆಲ್ಲಿಂದಲೂ ಇನ್ನೂ ಹಣ್ಣುಗಳು ಬರುತ್ತಿಲ್ಲ. ಬರುತ್ತಿರುವ ಹಣ್ಣಿನ ಕ್ವಾಲಿಟಿಯಲ್ಲೂ ಕೊಂಚ ಕಳಪೆಯಾಗಿದೆ. ಜತೆಗೆ ಮಂಡಿಗಳಲ್ಲೇ ದರ ಗಗನಮುಖಿಯಾಗಿರೋದ್ರಿಂದ ಗ್ರಾಹಕರು ಹೆಚ್ಚಿನ ಬೆಲೆಗೆ ಖರೀದಿಸುವ ಅನಿವಾರ್ಯ ಎದುರಾಗಿದೆ.

19-01-2022
Vsw Pg 11

ರಾಗಿ ಖರೀದಿಗೆ ಸರ್ಕಾರ ತೀರ್ಮಾನ

ರೈತರ ಸಂಕಷ್ಟಕ್ಕೆ ಸರಕಾರ ಸ್ಪಂದನೆ

ಬೆಂಗಳೂರು: ರಾಜ್ಯದ ರಾಗಿಬೆಳೆಗಾರರ ಬಹುದಿನದ ಬೇಡಿಕೆಯಂತೆ ಬೆಂಬಲ ಬೆಲೆಯಲ್ಲಿ ಹೆಚ್ಚುವರಿ ರಾಗಿ ಖರೀದಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ರಾಗಿಯ ಉತ್ಪಾದನೆ ಹಾಗೂ ಬೇಡಿಕೆ ಆಧರಿಸಿ ಬೆಂಬಲಬೆಲೆಯಲ್ಲಿ ಇಂತಿಷ್ಟೇ ರಾಗಿ ಖರೀದಿಸುವಂತೆ ಕೇಂದ್ರ ಸರ್ಕಾರ ಮಾರ್ಗಸೂಚಿ ನೀಡಿತ್ತು. ಅದರಂತೆ ರಾಜ್ಯ ಸರ್ಕಾರ ಬೆಂಬಲ ಬೆಲೆ ಕೊಟ್ಟು ರಾಗಿ ಖರೀದಿಸಿತ್ತು.ಆದರೆ,ರಾಜ್ಯದರೈತರುಹೆಚ್ಚಾಗಿ ರಾಗಿ ಬೆಳೆದಿರುವುದರಿಂದ ಮತ್ತು ಮಾರುಕಟ್ಟೆ ದರ ಕುಸಿತ ಕಂಡಿರುವುದರಿಂದ ಬೆಳೆಗಾರರಿಗೆ ನೆರವಿಗೆ ಬರುವಂತೆ ಮನವಿ ಮಾಡಲಾಗಿತ್ತು. ಇದಕ್ಕಾಗಿ ಸಾಕಷ್ಟು ಪ್ರತಿಭಟನೆಗಳು ನಡೆದಿದ್ದವಲ್ಲದೆ, ಇತ್ತೀಚೆಗೆ ಅಧಿವೇಶನದಲ್ಲೂ ವಿಷಯ ಪ್ರಸ್ತಾಪವಾಗಿತ್ತು. ಖರೀದಿ



ಪ್ರಕ್ರಿಯೆ ಮುಗಿದಿರುವುದರಿಂದ ಅವಕಾಶ ನೀಡಲು ಸಾಧ್ಯವಿಲ್ಲ ಎಂದಿದ್ದ ಸರ್ಕಾರ, ಬೆಳೆಗಾರರ ಹಿತ ಕಾಪಾಡುವ ಸಲುವಾಗಿ ತೀರ್ಮಾನವನ್ನು ಮರುಪರಿಶೀಲಿಸುವ ಭರವಸೆ ನೀಡಿತ್ತು. ಹೆಚ್ಚುವರಿಯಾಗಿ 3 ಲಕ್ಷ ಟನ್ ರಾಗಿ ಖರೀದಿಗೆ ಅನುಮತಿ ನೀಡುವಂತೆ ಕೇಂದ್ರಕ್ಕೂ ಪತ್ರ ಬರೆದಿತ್ತು. 2022ರ ಮಾರ್ಚ್ ಅಂತ್ಯಕ್ಕೆ ಕೊನೆಗೊಳ್ಳಲಿರುವ ಖರೀದಿ ಪ್ರಕ್ರಿಯೆ ವಿಸ್ತರಿಸುವ ಚಿಂತನೆಯೂ ನಡೆದಿತ್ತು. ಆದರಂತೆ ಸೋಮವಾರ ಸಿಎಂ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹೆಚ್ಚುವರಿ ರಾಗಿ ಖರೀದಿಗೆ ತೀರ್ಮಾನಿಸಲಾಗಿದೆ.

487 ಕೋಟಿ ರೂ. ಖರ್ಚು: ಈ ಕುರಿತು ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ, ಇದುವರೆಗೆ 2.1 ಲಕ್ಷ ಟನ್ ರಾಗಿ ಖರೀದಿಸಲಾಗಿದ್ದು, ಇನ್ನೂ ಕೆಲ ಜಿಲ್ಲೆಗಳ ರೈತರ ಬಳಿ ರಾಗಿ ಮಾರಾಟವಾಗದೆಯೇ ಹಾಗೇ ಉಳಿದಿದೆಯಲ್ಲದೆ, ಖರೀದಿಸಬೇಕೆಂಬ ಒತ್ತಡವೂ ಇತ್ತು. ಹೀಗಾಗಿ 1.14 ಲಕ್ಷ ಟನ್‌ನಷ್ಟು ಹೆಚ್ಚುವರಿ ರಾಗಿಯನ್ನು ಬೆಂಬಲ ಬೆಲೆಯಡಿ ಖರೀದಿಗೆ ತೀರ್ಮಾನಿಸಿದ್ದು, ಇದಕ್ಕಾಗಿ 487 ಕೋಟಿ ರೂ. ಖರ್ಚು ಬರಲಿದೆ ಎಂದು ವಿವರಿಸಿದರು.

19-01-2022
Hd Pg 11